ತಮಿಳು ಭಾಷೆಯ ಮಹಾಕಾವ್ಯ 'ಮಣಿಮೇಕಲೆ'. ಇದನ್ನು ರಚಿಸಿದವನು ಮಧುರೆ ನಗರದ ವರ್ತಕ ಶಾತ್ತನಾರ್ ಎಂಬ ಕವಿ. ಇಳಂಗೋ ಅಡಿಗಳ 'ಶಿಲಪ್ಪದಿಗಾರಂ' ಮತ್ತು 'ಮಣಿಮೇಕಲೆ' ಕಾವ್ಯಗಳನ್ನು ಅವಳಿ ಮಹಾ ಕಾವ್ಯಗಳೆಂದು ಕರೆಯಲಾಗುತ್ತದೆ. ಕೋವಲನ್ ಮಧುರೆಯಲ್ಲಿ ಹತನಾದ ನಂತರ, ಕೋವಲನ್‌ನ ಪ್ರೇಯಸಿ ಮಾಧವಿಯು ತನ್ನ ಮಗಳು ಮಣಿಮೇಕಲೆಯೊಂದಿಗೆ ಅರವಣ ಅಡಿಗಳ ಮೂಲಕ ಬೌದ್ಧ ಧರ್ಮವನ್ನು ಸ್ವೀಕರಿಸುತ್ತಾಳೆ. ಮಣಿಮೇಕಲೆಯನ್ನು ಕನ್ನಗಿಯ ಮಗಳೆಂದೇ ಹೇಳುತ್ತಾ, ಲೌಕಿಕದ ಎಲ್ಲ ಬಂಧನಗಳಿಂದ ಬಿಡುಗಡೆ ಪಡೆದು ಅವಳೊಂದಿಗೆ ವಿಹಾರವೊಂದರಲ್ಲಿ ಇರುತ್ತಾಳೆ. ಮಣಿಮೇಕಲೆಯು ಮಣಿಪಲ್ಲವ ದ್ವೀಪದಲ್ಲಿ ಗಂಧರ್ವರಿಂದ ತನಗೆ ದೊರೆತ ಅಮೃತ ಸುರಭಿ ಎನ್ನುವ ಅಕ್ಷಯಪಾತ್ರೆಯಿಂದ ದೀನ ದುರ್ಬಲರಿಗೆ ಅನ್ನ ನೀಡುತ್ತಾ, ಲೋಕದ ಬಡತನವನ್ನು ಹೋಗಲಾಡಿಸುತಾ, 'ಅನ್ನವೇ ಜೀವನ', 'ಅನ್ನವೇ ದಮ್ಮ' ಎಂದು ನಂಬಿ, ಜನರಿಗೆ ದಮ್ಮವನ್ನು ಬೋಧಿಸುತ್ತಾ ಕೀರ್ತಿವಂತಳಾಗುತ್ತಾಳೆ.

ಹಸಿರೆಂಬುದಿಲ್ಲ. ಇಷ್ಟು ದಿನ ವಳ್ಳಿಬೇರುಗಳನ್ನೇ ತಿಂದು ಹೇಗೋ ಜೀವ ಉಳಿಸಿಕೊಂಡಿದ್ದೇವೆ. ಇನ್ನು ನಮ್ಮಿಂದಾಗದು, ತಾವು ದಯಾವಂತರು. ನಮ್ಮನ್ನು ಉಳಿಸಿ' ಎಂದು ಮತ್ತೊಬ್ಬ ಹೇಳಿದ.

ಇಡೀ ಮಧುರೆ ನಗರ ಎಚ್ಚರವಿಲ್ಲದೆ ಮಲಗಿತ್ತು. ಶಾತ್ತನಾರ್ ದಿಕ್ಕುಗಾಣದವರಂತೆ ನಿಂತಿದ್ದರು.

'ಹಾಗಾದರೆ ನಾನು ಏನು ಮಾಡಲಿ?'

'ಅಯ್ಯಾ, ತಾವು ಕವಿಗಳು. ಎಲ್ಲವನ್ನೂ ಮುಂಗಾಣ್ಕೆಯಿಂದಲೇ ಕಾಣುವವರು. ತಮಗೆ ತಿಳಿಯದಿರುವುದು ಏನಿದೆ?'

'ಅಂದರೆ!'

'ಅಯ್ಯಾ, ರೋಗ-ರುಜಿನ, ಕ್ಷಾಮ-ಡಾಮರಗಳು ಬಂದಾಗ ನಮಗೆ ದೇವರು ನೆನಪಾಗುವುದಿಲ್ಲ! ನಮಗೆ ನೆನಪಾಗುವುದು ಮಣಿಮೇಕಲೆ ಮಾತ್ರ! ಮಧುರೆ ನಗರದ ಪ್ರೀತಿಯ ಕೂಸು ಅವಳು. ಕನ್ನಗಿಯ ಮಗಳು. ಹಸಿದವರಿಗೆ ಅನ್ನ ನೀಡುವ ತಾಯಿ ಅವಳು'

'ಅಯ್ಯಾ, ಕನ್ನಗಿಯನ್ನು ಪೂಜಿಸುವಂತೆಯೇ ನಾವು ಮಧುರೆ ದೇವತೆಯನ್ನೂ ಪೂಜಿಸುತ್ತೇವೆ. ನಮ್ಮ ನಿತ್ಯದ ಪೂಜೆಯಲ್ಲಿ ಅವಳಿಗೇ ಮೊದಲ ಸ್ಥಾನ. ಅವಳ ಹೆಸರಲ್ಲಿ ನಿತ್ಯವೂ ಕೂತ್ತು ವೆಳಕ್ಕು ಹಚ್ಚುತ್ತೇವೆ'.

'ಅಯ್ಯಾ, ಕನ್ನಗಿಯ ಮಗಳು ಮಣಿಮೇಕಲೆಯನ್ನು ನಮ್ಮ ನಾಡಿಗೆ ಕಳುಹಿಸಿಕೊಟ್ಟರೆ, ನಮ್ಮ ನಾಡು ಮಳೆ-ಬೆಳೆಯಿಂದ ಸಮೃದ್ಧವಾಗುತ್ತದೆ. ನಮ್ಮ ದನ-ಕರುಗಳು, ಎಲೆತೋಟಗಳು, ಗದ್ದೆಕೋಗು ಉಳಿಯುತ್ತವೆ. ನೀರಿನ ಗುಂಡಿಗಳು, ಕೆರೆಕಟ್ಟೆಗಳು ಉಸಿರಾಡುತ್ತವೆ. ಕಾಂಚೀಪುರದ ಮಕ್ಕಳು-ಮರಿ ಉಳಿಯುತ್ತವೆ. ಇದನ್ನು ತಿಳಿದೇ ನಾವು ನಿಮ್ಮಲ್ಲಿಗೆ ಬಂದಿದ್ದು. ದಯಮಾಡಿ ಮಣಿಮೇಕಲೆಯನ್ನು ನಮ್ಮ ಬರದ ನಾಡಿಗೆ ಕಳುಹಿಸಿಕೊಡಿ. ಮಗಳನ್ನು ತವರಿಗೆ ಕಳುಹಿಸಿಕೊಡುವಂತೆ'.

'ಇನ್ನು ಹಸಿವಿನ ಸಂಕಟ ತಾಳಲಾರೆವು. ಬರಗಾಲದ ಕಿಚ್ಚು ದಾಟಿ ನಿಮ್ಮಲ್ಲಿಗೆ ಬಂದಿದ್ದೇವೆ. ಮಧುರೆ ನಗರದ ಕವಿಯ ಮನೆಗೆ. ಕನ್ನಗಿಯ ನಾಡಿಗೆ. ಕವಿ ನಮಗೆ ಕರುಣೆತೋರಲಿ ಎಂದು. ಇನ್ನು ನಮಗೆ ಮುಂದಕ್ಕೆ ದಾರಿಯಿಲ್ಲ, ಹಿಂದಕ್ಕೂ ದಾರಿಯಿಲ್ಲ! ನೀವು ಕೃಪೆದೋರದಿದ್ದರೆ, ನಮ್ಮ ದಾರಿ ಇನ್ನು ಸ್ಮಶಾನದೆಡೆಗೆ'.

ಶಾತ್ತನಾರ್ ಅವರಿಗೆ ಏನೋ ಹೊಳೆದಂತಾಗಿ 'ನನಗೆ ಸಾಧ್ಯವಿದ್ದರೆ ಮಧುರೆಯ ವೈಗೈ ನದಿಯನ್ನೇ ಇವರಿಗೆ ಕೊಟ್ಟುಬಿಡುತ್ತಿದ್ದೆ!' ಎಂದುಕೊಂಡು ವೈಗೈ ನದಿ ಹರಿಯುವ ದಿಕ್ಕಿನತ್ತಲೇ ನೋಡತೊಡಗಿದರು. ಬಾಡಿದ್ದ ಅವರ ಕೈ ಬೆರಳುಗಳು ನಿಧಾನವಾಗಿ ಚಿಗುರತೊಡಗಿದವು.

ಶಾತ್ತನಾರ್ ನಿಂತಲ್ಲಿ ನಿಲ್ಲಲಾರದೆ ಚಡಪಡಿಸತೊಡಗಿದರು. ಹಸಿದವರ ಕಣ್ಣುಗಳಲ್ಲಿದ್ದ ನೋವು ಅವರ ಕಣ್ಣುಗಳಿಗೆ ಇಳಿಯತೊಡಗಿತು. ಬಂದವರಿಗೆ ಏನು ಹೇಳಬೇಕು ಎಂಬುದು ಅವರಿಗೆ ತಿಳಿಯಲಿಲ್ಲ! ಮಣಿಮೇಕಲೆಯನ್ನು ನೋಡಿ ಬಹಳ ವರುಷಗಳಾಗಿದ್ದವು. ಅವಳೀಗ ಬೌದ್ಧ ಸನ್ಯಾಸಿನಿಯಾಗಿ